Azadi Ka Amrit Mahotsav

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001**

ಸಂಖ್ಯೆ: ಶಿ.ವ.ಕೋಶ.ಸಾ.ವ/01/2022-23 ದಿನಾಂಕ: 11/01/2023

## : ಪರಿಷ್ಕೃತ ವರ್ಗಾವಣಾ ವೇಳಾಪಟ್ಟಿ :

**ವಿಷಯ:** 2022-23ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಒಳಗೊಂಡಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢ ಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಗಳನ್ನು ಹಮ್ಮಿಕೊಳ್ಳುವ ಬಗ್ಗೆ.

**ಉಲ್ಲೇಖ:** 1. ಈ ಕಛೇರಿಯಿಂದ ಹೊರಡಿಸಲಾಗಿರುವ ವರ್ಗಾವಣಾ ಅಧಿಸೂಚನೆ ದಿನಾಂಕ: 26/12/2023.
2. ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 06/01/2023.

*********

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ-2020 [2020ರ ಕರ್ನಾಟಕ ಅಧಿನಿಯಮ ಸಂಖ್ಯೆ:04] ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು-2020ರ ನಿಯಮಗಳಂತೆ, ಹಾಗೂ ವರ್ಗಾವಣಾ ತಿದ್ದುಪಡಿ ಕಾಯ್ದೆ ಮತ್ತು ನಿಯಮ-2022ರ ಪ್ರಕಾರ ಉಲ್ಲೇಖಿತ-1ರಲ್ಲಿ ಈಗಾಗಲೇ ಮಾರ್ಗಸೂಚಿ ಸಹಿತ ವರ್ಗಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು, ಕೆಲವು ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ಹೆಚ್ಚುವರಿ ಶಿಕ್ಷಕರ ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಣೆಯನ್ನು ಮುಂದೂಡಲಾಗಿತ್ತು. ಪ್ರಸ್ತುತ ವರ್ಗಾವಣಾ ವೇಳಾಪಟ್ಟಿಯನ್ನು ಕೆಳಕಂಡಂತೆ ಪರಿಷ್ಕರಿಸಿದೆ. ಉಳಿದಂತೆ ದಿನಾಂಕ:26/12/2022ರಂದು ಹೊರಡಿಸಲಾದ ವರ್ಗಾವಣಾ ಅಧಿಸೂಚನೆಯಲ್ಲಿಯಲ್ಲಿರುವ ಎಲ್ಲಾ ಮಾರ್ಗಸೂಚಿ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತದೆ. ಈ ವೇಳಾಪಟ್ಟಿಯ ಜೊತೆಯಲ್ಲಿ ಸದರಿ ಮಾರ್ಗಸೂಚಿ ಅಂಶಗಳನ್ನು ಓದಿಕೊಳ್ಳತಕ್ಕದ್ದು.

## ಪರಿಷ್ಕೃತ ವರ್ಗಾವಣಾ ವೇಳಾಪಟ್ಟಿ *** :

| ಕ್ರ.ಸ | ವಿವರ | ವೃಂದ | | | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|---|---|
| | ವರ್ಗಾವಣೆ ವಿಧ | ಪ್ರಾಥಮಿಕ ಶಿಕ್ಷಕರ ವೃಂದ | ಪ್ರೌಢಶಾಲಾ ಶಿಕ್ಷಕರ ವೃಂದ | ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದ | |
| **1** | **ಶಿಕ್ಷಕರ ಸಮರ್ಪಕ ಮರುಹಂಚಿಕೆ ಕೌನ್ಸಿಲಿಂಗ್ ಕ್ರಮಗಳು** | | | | |
| ಅ | ಹೆಚ್ಚುವರಿ ಶಿಕ್ಷಕರ ಪರಿಷ್ಕೃತ ಕರಡು ಪಟ್ಟಿ ಪ್ರಕಟಣೆ | 11/01/2023 | 11/01/2023 | ---- | ಕ್ಷೇತ್ರಶಿಕ್ಷಣಾಧಿಕಾರಿಗಳು /ಉಪನಿರ್ದೇಶಕರು |
| ಆ | ವರ್ಗಾವಣಾ ತಂತ್ರಾಂಶದ ಮುಖಾಂತರ<br>• ಮೇಲಿನಂತೆ ಹೆಚ್ಚುವರಿ ಪಟ್ಟಿಯಲ್ಲಿರುವ ಶಿಕ್ಷಕರು ತಂತ್ರಾಂಶದಲ್ಲಿ ಆದ್ಯತೆ/ವಿನಾಯಿತಿ ಕೋರಿ ಅರ್ಜಿಯನ್ನು ಸಲ್ಲಿಸುವುದು ಮತ್ತು ಪೂರಕ ದಾಖಲೆಗಳನ್ನು ಅಪ್‌ಲೋಡ್ ಮಾಡಲು ನಿಗಧಿಪಡಿಸಿದ ಅವಧಿ.<br>• ಸೆಕ್ಷನ್ 10ರ (I)ರಿಂದ(IV)ರವರೆಗಿನ ವಿನಾಯಿತಿ ಕೋರಿರುವವರು ಈಗಾಗಲೇ ಸಲ್ಲಿಸಿರುವ ದಾಖಲೆಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು (Accept) ಮಾಡಿದ್ದಲ್ಲಿ ಸದರಿ ದಾಖಲೆಗಳ ಆದ್ಯತೆಯನ್ನು ಪರಿಗಣಿಸಲಾಗುವುದು. ಮತ್ತೊಮ್ಮೆ ಕ್ಲೇಂ ಮಾಡುವ ಅವಶ್ಯಕತೆ ಇರುವುದಿಲ್ಲ<br>[ಆದ್ಯತೆ ಕೋರುವ ಪ್ರಕರಣಗಳಲ್ಲಿ ಅಗತ್ಯವಾದ ದಾಖಲೆಗಳನ್ನು ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ಅಪ್‌ಲೋಡ್ ಮಾಡದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿಯೇ ತಿರಸ್ಕರಿಸಲು ಕ್ರಮವಹಿಸುವುದು] | 11/01/2023 ರಿಂದ 13/01/2023 | 11/01/2023 ರಿಂದ 13/01/2023 | ಸಮರ್ಪಕ ಮರುಹಂಚಿಕೆ ಕ್ರಮಗಳು ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು / ಜಿಲ್ಲಾ ಉಪನಿರ್ದೇಶಕರು |

| | | | | | |
|---|---|---|---|---|---|
| ಇ | ಹೆಚ್ಚುವರಿ ಶಿಕ್ಷಕರು ಸಲ್ಲಿಸಿರುವ ಆದ್ಯತೆಯಲ್ಲಿನ ದಾಖಲೆಗಳ ಪರಿಶೀಲನೆ/ಅಂಗೀಕಾರ/ತಿರಸ್ಕಾರ. | 12/01/2023 ರಿಂದ 16/01/2023 | 12/01/2023 ರಿಂದ 16/01/2023 | ಸಮರ್ಪಕ ಮರುಹಂಚಿಕೆ ಕ್ರಮಗಳು ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು / ಜಿಲ್ಲಾ ಉಪನಿರ್ದೇಶಕರು |
| ಈ | ಆದೇಶದಿಂದ ಬಾದಿತರಾದ ಶಿಕ್ಷಕರು ಕುಂದುಕೊರತೆ ನಿವಾರಣಾ ಅಧಿಕಾರಿಗಳನ್ನು ಸಂಪರ್ಕಿಸಲು ನಿಗಧಿಪಡಿಸಿದ ಅವಧಿ. | 16/01/2023 ರಿಂದ 17/01/2023 | 16/01/2023 ರಿಂದ 17/01/2023 | ------ | ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು / ಜಿಲ್ಲಾ ಉಪನಿರ್ದೇಶಕರು |
| ಉ | ಅಂತಿಮ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ನಂತರ ಕ್ಷೇತ್ರಶಿಕ್ಷಣಾಧಿಕಾರಿಗಳು ಪ್ರಕಟಿಸುವ ಪುರಸ್ಕೃತ/ತಿರಸ್ಕೃತ ಪಟ್ಟಿಯಿಂದ ಬಾದಿತರಾಗುವ ಶಿಕ್ಷಕರು ಸಲ್ಲಿಸುವ ಮನವಿಯ ಇತ್ಯರ್ಥ ಹಾಗೂ ಇಂದೀಕರಣ | ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಆಯಾ ಕಛೇರಿ ಮುಖ್ಯಸ್ಥರು. ಅಲಿಕೆ ದಿನಾಂಕ: 18/01/2023 ರಂದು ವಿಭಾಗೀಯ ಜಂಟಿ ನಿರ್ದೇಶಕರು ವ್ಯಾಪ್ತಿಯ ಉಪನಿರ್ದೇಶಕರೊಂದಿಗೆ ಸಮಾಲೋಚಿಸಿ ಶಿಕ್ಷಕ ವಲಯದ ಮಾಹಿತಿಗೆ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು. ಅಲಿಕೆ ಪ್ರಕ್ರಿಯೆಯವನ್ನು ಹಮ್ಮಿಕೊಂಡು ಸೂಕ್ತ ಲಿಖಿತ ಸಮಜಾಯಿಷಿಯನ್ನು ಸಂಬಂಧಿತರಿಗೆ ನೀಡತಕ್ಕದ್ದು. ನಂತರ ವಿಭಾಗೀಯ ಜಂಟಿನಿರ್ದೇಶಕರು ಮೇಲಿನ ಪ್ರಕ್ರಿಯೆಯಲ್ಲಿ ಸಿಂಧುವಾದ ಆಕ್ಷೇಪಣೆಗಳುಳ್ಳ ಅರ್ಜಿಗಳು ಸಲ್ಲಿಕೆಯಾಗಿದ್ದಲ್ಲಿ ಆ ಬಗ್ಗೆ ಕಾರಣ ಸಹಿತ ನಮೂದಿಸಿ ಕೌನ್ಸಿಲಿಂಗ್‌ಗೆ ಅರ್ಹ ರಿರುವ ಶಿಕ್ಷಕರ ಪಟ್ಟಿಯನ್ನು ಅಂತಿಮ ಗೊಳಿಸುವುದು | | | |
| ಊ | ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆ ಕೌನ್ಸಿಲಿಂಗ್‌ಗೆ ಅರ್ಹರಿರುವ ಶಿಕ್ಷಕರ ಅಂತಿಮ ಜ್ಯೇಷ್ಠತಾ ಪಟ್ಟಿ<br>ಎಲ್ಲಾ ವೃಂದವಾರು, ಶಾಲಾವಾರು ವಿಷಯವಾರು ಖಾಲಿ ಹುದ್ದೆಗಳ ಪ್ರಕಟಣೆ(ತಾಲ್ಲೂಕುವಾರು/ ಜಿಲ್ಲಾವಾರು) | 23/01/2023 | 23/01/2023 | ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ಋ | ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹೊಂದಾಣಿಕೆ ಕೌನ್ಸಿಲಿಂಗ್ **ಬ್ಲಾಕ್ ಹಂತ** | 24/01/2023 ಪೂರ್ವಾಹ್ನ | 25/01/2023 | ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ಎ | ಬ್ಲಾಕ್ ಹಂತದ ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹೊಂದಾಣಿಕೆಯ ನಂತರ ತಾಲ್ಲೂಕಿನಲ್ಲಿ ಉಳಿಕೆಯಾಗುವ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ **ಜಿಲ್ಲಾ ಹಂತದಲ್ಲಿ** | 24/01/2023 ಅಪರಾಹ್ನ | | ಅನ್ವಯವಾಗುವುದಿಲ್ಲ | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ಏ | ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ನಂತರ ಉಳಿಕೆಯಾಗುವ ಹೆಚ್ಚುವರಿ ಶಿಕ್ಷಕರನ್ನು ಜಿಲ್ಲೆಯೊಳಗೆ ಪಿ.ಟಿ.ಆರ್ ಪ್ರಕಾರ ಅತೀ ಹೆಚ್ಚಿನ ಮಕ್ಕಳ ದಾಖಲಾತಿ ಇರುವ ಶಾಲೆಗಳಲ್ಲಿ ಇಳಿಕೆ ಕ್ರಮಾಂಕದಲ್ಲಿ ಶಿಕ್ಷಕರ ಮರುಹೊಂದಾಣಿಕೆ ಕ್ರಮಗಳು-**ಜಿಲ್ಲಾ ಹಂತದಲ್ಲಿ** | 30/01/2023 | 30/01/2023 | ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| **2** | **ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವರ್ಗಾವಣೆ ಕ್ರಮಗಳು** | | | | |
| ಅ | ವರ್ಗಾವಣೆ ಅಧಿಸೂಚನೆ ದಿನಾಂಕಕ್ಕೆ ಗರಿಷ್ಠ 5 ವರ್ಷದ ಅವಧಿ ಪೂರ್ಣಗೊಂಡು / 3 ವರ್ಷದ ಮೇಲ್ಪಟ್ಟು 5 ವರ್ಷದೊಳಗಿನ ಅವಧಿಯಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ 02 ಪತ್ಯೇಕ ಪಟ್ಟಿ ಪ್ರಕಟಣೆ. | ಪಟ್ಟಿ ಪ್ರಕಟಿಸಲಾಗಿದೆ | ಪಟ್ಟಿ ಪ್ರಕಟಿಸಲಾಗಿದೆ | ಪಟ್ಟಿ ಪ್ರಕಟಿಸಲಾಗಿದೆ | ಜಂಟಿ ನಿರ್ದೇಶಕರು(ಆಡಳಿತ)/ ಉಪನಿರ್ದೇಶಕರು [ಆಡಳಿತ] ಹಾಗೂ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ರವರ ಸಹಯೋಗದೊಂದಿಗೆ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು(ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲಬುರ್ಗಿ |
| | ಪ್ರಕಟಿತ ಪಟ್ಟಿಗೆ ಆಕ್ಷೇಪಣೆಗಳನ್ನು ಹಾಗೂ ಗರಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿದವರು ಆದ್ಯತೆಯನ್ನು ಕ್ಲೇಮ್ ಮಾಡಲು ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ನಿಗಧಿಪಡಿಸಿದ ಅವಧಿ | 11/01/2023 ರಿಂದ 16/01/2023 | 11/01/2023 ರಿಂದ 16/01/2023 | 11/01/2023 ರಿಂದ 16/01/2023 | |
| ಆ | ಆಕ್ಷೇಪಣಾ ಅವಧಿ<br>ಮೇಲಿನಂತೆ ಪ್ರಕಟಿಸಿರುವ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ಪಟ್ಟಿಯನ್ನು ಅಂತಿಮಗೊಳಿಸುವುದು. | 12/01/2023 ರಿಂದ 17/01/2023 | 12/01/2023 ರಿಂದ 17/01/2022 | 12/01/2023 ರಿಂದ 17/01/2023 | |



Scanned with OKEN Scanner

| | | | | | |
|---|---|---|---|---|---|
| ಇ | ಆಕ್ಷೇಪಣೆ ಪರಿಶೀಲನೆ ನಂತರ ನಿರ್ದಿಷ್ಟಪಡಿಸಿದ ಹುದ್ದೆಗಳ ಗರಿಷ್ಠ ಅವಧಿ (5-ವರ್ಷ) ಪೂರ್ಣಗೊಳಿಸಿದವರ ಆದ್ಯತಾ ಪಟ್ಟಿ ಪ್ರಕಟಣೆ. | 18/01/2023 | 18/01/2023 | 18/01/2023 | ಜಂಟಿ ನಿರ್ದೇಶಕರು(ಆಡಳಿತ)/ ಉಪನಿರ್ದೇಶಕರು [ಆಡಳಿತ] ಹಾಗೂ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ರವರ ಸಹಯೋಗದೊಂದಿಗೆ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು(ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲ್ಬುರ್ಗಿ |
| ಇ | ಪ್ರಕಟಿತ ತಾತ್ಕಾಲಿಕ ಆದ್ಯತಾ ಪಟ್ಟಿಯ ಆದೇಶದಿಂದ ಬಾಧಿತರಾದ ಶಿಕ್ಷಕರು ಕುಂದುಕೊರತೆ ನಿವಾರಣಾ ಅಧಿಕಾರಿಗಳನ್ನು ಸಂಪರ್ಕಿಸಲು ನಿಗಧಿಪಡಿಸಿದ ಅವಧಿ. | 18/01/2023 ರಿಂದ 20/01/2023 | 18/01/2023 ರಿಂದ 20/01/2023 | 18/01/2023 ರಿಂದ 20/01/2023 | |
| ಈ | ಅಂತಿಮ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ನಂತರ ಕ್ಷೇತ್ರಶಿಕ್ಷಣಾಧಿಕಾರಿಗಳು ಪ್ರಕಟಿಸುವ ಪುರಸ್ಕೃತ/ ತಿರಸ್ಕೃತ ಪಟ್ಟಿಯಿಂದ ಬಾಧಿತರಾಗುವ ಶಿಕ್ಷಕರು ಸಲ್ಲಿಸುವ ಮನವಿಯ ಇತ್ಯರ್ಥ ಹಾಗೂ ಖಂದೀಕರಣ | ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಆಯಾ ಕಛೇರಿ ಮುಖ್ಯಸ್ಥರು. ಅಲಿಕೆ ದಿನಾಂಕ: 21/01/2023 ರಂದು ವಿಭಾಗೀಯ ಜಂಟಿ ನಿರ್ದೇಶಕರು ವ್ಯಾಪ್ತಿಯ ಉಪನಿರ್ದೇಶಕರೊಂದಿಗೆ ಸಮಾಲೋಚಿಸಿ ಶಿಕ್ಷಕ ವಲಯದ ಮಾಹಿತಿಗೆ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು, ಅಲಿಕೆ ಪ್ರಕ್ರಿಯೆಯವನ್ನು ಹಮ್ಮಿಕೊಂಡು ಸೂಕ್ತ ಲಿಖಿತ ಸಮಜಾಯಿಷಿಯನ್ನು ಸಂಬಂಧಿತರಿಗೆ ನೀಡತಕ್ಕದ್ದು. ನಂತರ ವಿಭಾಗೀಯ ಜಂಟಿನಿರ್ದೇಶಕರು ಮೇಲಿನ ಪ್ರಕ್ರಿಯೆಯಲ್ಲಿ ಸಿಂಧುವಾದ ಆಕ್ಷೇಪಣೆಗಳುಳ್ಳ ಅರ್ಜಿಗಳು ಸಲ್ಲಿಕೆಯಾಗಿದ್ದಲ್ಲಿ ಆ ಬಗ್ಗೆ ಕಾರಣ ಸಹಿತ ನಮೂದಿಸಿ ಕೌನ್ಸಿಲಿಂಗ್‌ಗೆ ಅರ್ಹ ರಿರುವ ಶಿಕ್ಷಕರ ಪಟ್ಟಿಯನ್ನು ಅಂತಿಮ ಗೊಳಿಸುವುದು | | | |
| ಉ | ವೃಂದವಾರು ಖಾಲಿ ಹುದ್ದೆಗಳ ಮರು ಪ್ರಕಟಣೆ | 30/01/2023 | 30/01/2023 | 30/01/2023 | |
| ಊ | ಆಕ್ಷೇಪಣೆಗಳ ಪರಿಶೀಲನೆ ನಂತರ ಐದು ವರ್ಷ ಪೂರ್ಣಗೊಂಡ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಮತ್ತು ತಾಂತ್ರಿಕ ಸಹಾಯಕರ ಅಂತಿಮ ಪಟ್ಟಿ ಪ್ರಕಟಣೆ | 30/01/2023 | 30/01/2023 | 30/01/2023 | |
| ಋ | ಅಂತಿಮ ಆದ್ಯತಾ ಪಟ್ಟಿಯಂತೆ ಗರಿಷ್ಠ (05 ವರ್ಷ) ಅವಧಿ ಮುಗಿದ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ.(ಕೋರಿಕೆ ವರ್ಗಾವಣೆ ಪೂರ್ವದಲ್ಲಿ) | 31/01/2023 ಪೂರ್ವಾಹ್ನ | 31/01/2023 ಅಪರಾಹ್ನ | 31/01/2023 | |
| **3.** | **ಸಾಮಾನ್ಯ ಕೋರಿಕೆ ವರ್ಗಾವಣೆಗಳು** | | | | |
| ಅ | ಸಾಮಾನ್ಯ ವರ್ಗಾವಣೆಗೆ ಅರ್ಜಿಸಲ್ಲಿಸುವ ದಿನಾಂಕ<br>• ಘಟಕದೊಳಗಿನ ಮತ್ತು ಹೊರಗೆ ಕೋರಿಕೆ ಮತ್ತು ಪರಸ್ಪರವರ್ಗಾವಣೆಗಳಿಗೆ-ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರ ಮತ್ತು ಪ್ರೌಢಶಾಲಾ ಮುಖ್ಯಶಿಕ್ಷಕರು)<br>• ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಶಿಕ್ಷಕರು ಮಾತ್ರ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ ಹಿಂದಿನ ಸಾಲಿನಲ್ಲಿ ಕಡ್ಡಾಯ/ಹೆಚ್ಚುವರಿಯಾದ ಶಿಕ್ಷಕರು ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.<br>• ಕನಿಷ್ಠ(3) ವರ್ಷ ಅವಧಿ ಪೂರ್ಯೆಸಿದ ಹಾಗೂ ಗರಿಷ್ಠ(5) ವರ್ಷ ಅವಧಿ ಪೂರ್ಯೆಸದ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ವರ್ಗಾವಣೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ (ಯಾವುದೇ ಆದ್ಯತೆ / ವಿನಾಯಿತಿಗಳು ಅನ್ವಯವಾಗುವುದಿಲ್ಲ).<br>ಅರ್ಜಿ ಸಲ್ಲಿಸಬಯಸುವವರು ಕೋರಿಕೆ ವರ್ಗಾವಣೆಗಳಿಗೆ ಆದ್ಯತೆಗಾಗಿ ಅಗತ್ಯ ದಾಖಲೆಗಳನ್ನು ತಂತ್ರಾಂಶದಲ್ಲಿ ಸಲ್ಲಿಸಲು ಇರುವ ಕಾಲಾವಧಿ [ಆದ್ಯತೆ ಕೋರುವ ಪ್ರಕರಣಗಳಲ್ಲಿ ಅಗತ್ಯವಾದ ದಾಖಲೆಗಳನ್ನು ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ಅಪ್‌ಲೋಡ್ ಮಾಡದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿಯೇ ತಿರಸ್ಕರಿಸಲು ಕ್ರಮವಹಿಸುವುದು] | 02/01/2023 ರಿಂದ 30/01/2023 | 02/01/2023 ರಿಂದ 30/01/2023 | 02/01/2023 ರಿಂದ 30/01/2023 | ಜಂಟಿ ನಿರ್ದೇಶಕರು(ಆಡಳಿತ)/ ಉಪನಿರ್ದೇಶಕರು [ಆಡಳಿತ] ಹಾಗೂ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ರವರ ಸಹಯೋಗದೊಂದಿಗೆ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು(ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲ್ಬುರ್ಗಿ ಅಪರಆಯುಕ್ತಾಲಯ |
| ಆ | ದಾಖಲೆಗಳನ್ನು ಪರಿಶೀಲಿಸಿ ತಂತ್ರಾಂಶದಲ್ಲಿ ತಿರಸ್ಕಾರ/ಅಂಗೀಕಾರ ಮಾಡಲು ನಿಗಧಿಪಡಿಸಿರುವ ಅವಧಿ | 06/01/2023 ರಿಂದ 03/02/2023 | 06/01/2023 ರಿಂದ 03/02/2023 | 06/01/2023 ರಿಂದ 03/02/2023 | ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು |
| ಇ | ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಅರ್ಹರಾದ/ಅನರ್ಹರಾದ ಶಿಕ್ಷಕರ ತಾತ್ಕಾಲಿಕ ಆದ್ಯತಾಪಟ್ಟಿ ಪ್ರಕಟಣೆ. | 04/02/2023 | 04/02/2023 | 04/02/2023 | ಉಪನಿರ್ದೇಶಕರು [ಆಡಳಿತ] |



Scanned with OKEN Scanner

| | | | | | |
|---|---|---|---|---|---|
| ಈ | ಮೇಲಿನಂತೆ ಪ್ರಕಟಿಸಿರುವ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಅವಧಿ.<br>ಜಿಲ್ಲೆಯ ಒಳಗೆ / ವಿಭಾಗದ ಒಳಗೆ / ವಿಭಾಗದ ಹೊರಗೆ ಕೋರಿಕೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಶಿಕ್ಷಕರುಗಳ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ನಂತರ ಇಂದೀಕರಣ ಹಾಗೂ ಅಂತಿಮ ಜ್ಯೇಷ್ಠತಾ ಪಟ್ಟಿ ಪ್ರಕಟಣೆಗೆ ಸಿದ್ಧತೆ. | 04/02/2023 ರಿಂದ 06/02/2023 ರವರೆಗೆ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಆಯಾ ಕಛೇರಿ ಮುಖ್ಯಸ್ಥರು. ಆಲಿಕೆ ದಿನಾಂಕ: 07/02/2023 ರಂದು ವಿಭಾಗೀಯ ಜಂಟಿ ನಿರ್ದೇಶಕರು ವ್ಯಾಪ್ತಿಯ ಉಪನಿರ್ದೇಶಕರೊಂದಿಗೆ ಸಮಾಲೋಚಿಸಿ ಶಿಕ್ಷಕ ವಲಯದ ಮಾಹಿತಿಗೆ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು. ಆಲಿಕೆ ಪ್ರಕ್ರಿಯೆಯವನ್ನು ಹಮ್ಮಿಕೊಂಡು ಸೂಕ್ತ ಲಿಖಿತ ಸಮಜಾಯಿಷಿಯನ್ನು ಸಂಬಂಧಿತರಿಗೆ ನೀಡತಕ್ಕದ್ದು. ನಂತರ ವಿಭಾಗೀಯ ಜಂಟಿನಿರ್ದೇಶಕರು ಮೇಲಿನ ಪ್ರಕ್ರಿಯೆಯಲ್ಲಿ ಸಿಂಧುವಾದ ಆಕ್ಷೇಪಣೆಗಳುಳ್ಳ ಅರ್ಜಿಗಳು ಸಲ್ಲಿಕೆಯಾಗಿದ್ದಲ್ಲಿ ಆ ಬಗ್ಗೆ ಕಾರಣ ಸಹಿತ ನಮೂದಿಸಿ ಕೌನ್ಸಿಲಿಂಗ್‌ಗೆ ಅರ್ಹರಿರುವ ಶಿಕ್ಷಕರ ಪಟ್ಟಿಯನ್ನು ಅಂತಿಮ ಗೊಳಿಸುವುದು | | | |
| ಉ | ಮೇಲಿನಂತೆ ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳಿಗೆ ಅರ್ಜಿ ಸಲ್ಲಿಸಿದ ಶಿಕ್ಷಕರುಗಳ ಜಿಲ್ಲಾ/ವಿಭಾಗ/ಅಂತರ್ ವಿಭಾಗ ಮಟ್ಟದ ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ ಮತ್ತು ಕನಿಷ್ಠ (3 ರಿಂದ 5 ವರ್ಷದೊಳಗಡೆ) ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೆ ಶಿಕ್ಷಕರುಗಳ ಅಂತಿಮ ಜ್ಯೇಷ್ಠತಾ ಪಟ್ಟಿ ಪ್ರಕಟಣೆ.<br>ಕೌನ್ಸಿಲಿಂಗ್‌ಗೆ ಲಭ್ಯವಿರುವ ವೃಂದವಾರು/ ವಿಷಯವಾರು ಖಾಲಿ ಹುದ್ದೆಗಳ ಪ್ರಕಟಣೆ | 08/02/2023 | 08/02/2023 | 08/02/2023 | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು(ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲಬುರ್ಗಿ ಅಪರ ಆಯುಕ್ತಾಲಯ |

| 4 | (1) ಜಿಲ್ಲಾ ಹಂತದ ವರ್ಗಾವಣೆ ಕೌನ್ಸಿಲಿಂಗ್ ಕ್ರಮಗಳು [ಜಿಲ್ಲೆಯ ಒಳಗೆ] | | | | |
|---|---|---|---|---|---|
| ಕ್ರಸ | ವಿವರ | ಪ್ರಾಥಮಿಕ ಶಿಕ್ಷಕರ ವೃಂದ | ಪ್ರೌಢಶಾಲಾ ಶಿಕ್ಷಕರ ವೃಂದ | ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದ | ಕ್ರಮ ವಹಿಸುವ ಅಧಿಕಾರಿಗಳು |
| ಅ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕೋರಿಕೆ ವರ್ಗಾವಣೆಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ<br>ತಾಲ್ಲೂಕಿನ ಒಳಗೆ ಮತ್ತು ತಾಲ್ಲೂಕಿನ ಹೊರಗೆ | 09/02/2023 ರಿಂದ 14/02/2023 | 13/02/2023 ರಿಂದ 15/02/2023 | ಅನ್ವಯವಾಗುವುದಿಲ್ಲ | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ಆ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಪರಸ್ಪರ ವರ್ಗಾವಣೆಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 16/02/2023 ಪೂರ್ವಾಹ್ನ | 16/02/2023 ಅಪರಾಹ್ನ | ಅನ್ವಯವಾಗುವುದಿಲ್ಲ | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ಇ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕನಿಷ್ಠ (3 ರಿಂದ 5 ವರ್ಷದೊಳಗಡೆ) ಅವಧಿ ಮುಗಿದ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ.<br>(ಜಿಲ್ಲೆಯೊಳಗಿನ ಕೋರಿಕೆ ವರ್ಗಾವಣೆ ನಂತರ) | 17/02/2023 | 17/02/2023 | | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| 5 | (2) ವಿಭಾಗೀಯ ಹಂತದ ವರ್ಗಾವಣೆ ಕ್ರಮಗಳು [ವಿಭಾಗದ ಒಳಗೆ] | | | | |
| ಅ | ಕೌನ್ಸಿಲಿಂಗ್‌ಗೆ ಲಭ್ಯವಿರುವ ವೃಂದವಾರು/ ವಿಷಯವಾರು ಖಾಲಿ ಹುದ್ದೆಗಳ ಪ್ರಕಟಣೆ | 17/02/2023 | 17/02/2023 | 17/02/2023 | ವಿಭಾಗೀಯ ಸಹನಿರ್ದೇಶಕರು. ಜಂಟಿನಿರ್ದೇಶಕರು(ಆಡಳಿತ) ನಿರ್ದೇಶಕರು ಧಾರವಾಡ/ ಕಲಬುರ್ಗಿ ಅಪರ ಆಯುಕ್ತಾಲಯ |
| ಆ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕೋರಿಕೆ ವರ್ಗಾವಣೆಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 20/02/2023 ರಿಂದ 24/02/2023 | 24/02/2023 ರಿಂದ 28/02/2023 | 22/02/2023 | |
| ಇ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಪರಸ್ಪರ ವರ್ಗಾವಣೆಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 01/03/2023 ಪೂರ್ವಾಹ್ನ | 01/03/2023 ಅಪರಾಹ್ನ | 23/02/2023 | ವಿಭಾಗೀಯ ಸಹನಿರ್ದೇಶಕರು/ ಜಂಟಿನಿರ್ದೇಶಕರು (ಆಡಳಿತ) |
| ಈ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕನಿಷ್ಠ (3 ರಿಂದ 5 ವರ್ಷದೊಳಗಡೆ) ಅವಧಿ ಮುಗಿದ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. (ಆಯಾ ವಿಭಾಗದೊಳಗೆ) | ಅನ್ವಯವಾಗುವುದಿಲ್ಲ | ಅನ್ವಯವಾಗುವುದಿಲ್ಲ | 24/02/2023 | ಜಂಟಿ ನಿರ್ದೇಶಕರು (ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲಬುರ್ಗಿ ಅಪರ ಆಯುಕ್ತಾಲಯ |
| 6 | (3) ಅಂತರ್ ವಿಭಾಗೀಯ ಹಂತದ ವರ್ಗಾವಣೆ ಕ್ರಮಗಳು [ವಿಭಾಗದ ಹೊರಗೆ] | | | | |
| ಅ | ವಿಭಾಗದ ಹೊರಗಿನ ಕೋರಿಕೆ ವರ್ಗಾವಣೆ ಕೌನ್ಸಿಲಿಂಗ್ ಅಂತಿಮ ಖಾಲಿ ಹುದ್ದೆಗಳ ಪಟ್ಟಿ ಪ್ರಕಟ. | 01/03/2023 | 09/03/2023 | 04/03/2023 | |



Scanned with OKEN Scanner

| | | | | | |
|---|---|---|---|---|---|
| ಅ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕೋರಿಕೆ ವರ್ಗಾವಣೆಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 02/03/2023 ರಿಂದ 09/03/2023 | 10/03/2023 ರಿಂದ 15/03/2023 | 06/03/2023 | ನಿರ್ದೇಶಕರು ಪ್ರಾಥಮಿಕ / ಪ್ರೌಢ ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು (ಆಡಳಿತ) ಬೆಂಗಳೂರು |
| ಇ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಪರಸ್ಪರ ವರ್ಗಾವಣೆಗಳ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 10/03/2023 | 16/03/2023 | 07/03/2023 | |

(*** ವೇಳಾಪಟ್ಟಿಯು ತಾಂತ್ರಿಕ ಕಾರಣಗಳಿಂದ ಬದಲಾವಣೆಗೆ ಒಳಪಟ್ಟಿರುತ್ತದೆ.)

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020 ಬೆಂಗಳೂರು ದಿನಾಂಕ:27/03/2020 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 8 ಇಟಿಆರ್ 2020 ದಿನಾಂಕ:22/07/2020 ಹಾಗೂ ಇಲಾಖಾ ಆದೇಶಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಂಡು, ಪ್ರಸ್ತಾಪಿತ ವರ್ಗಾವಣಾ ಪ್ರಕ್ರಿಯೆಗಳನ್ನು ಯಾವುದೇ ಲೋಪದೋಷಗಳಿಗೆ ಎಡೆಮಾಡಿಕೊಡದಂತೆ ಸಕ್ಷಮ ವರ್ಗಾವಣಾ ಪ್ರಾಧಿಕಾರಿಗಳು ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಲು ತಿಳಿಸಿದೆ.

**ಅಭ್ಯರ್ಥಿಗಳಿಗೆ ಸೂಚನೆ:**

- ವರ್ಗಾವಣಾ ತಂತ್ರಾಂಶದಲ್ಲಿ ಶಿಕ್ಷಕರು ಅರ್ಜಿ ಸಲ್ಲಿಸುವಾಗ ವಿನಾಯಿತಿ/ಆದ್ಯತೆ ಕೋರುವ ದಾಖಲೆಗಳನ್ನು ಮತ್ತು ಇತರ ಸೇವಾ ಮಾಹಿತಿಯನ್ನು ಬಹಳ ಎಚ್ಚರಿಕೆಯಿಂದ ಅಪ್‌ಲೋಡ್ ಮಾಡತಕ್ಕದ್ದು, ತಪ್ಪಾಗಿ ಅರ್ಜಿ ಸಲ್ಲಿಸಿ ನಂತರ ತಪ್ಪು ಎಂದು ಕಂಡುಬಂದ ನಂತರ ತಿದ್ದುಪಡಿಗೆ ಹಾಗೂ ಪುನರ್ ಪರಿಶೀಲಿಸಿ ಹೊಸದಾಗಿ ಅರ್ಜಿ ಸಲ್ಲಿಸಲು ಯಾವುದೇ ಕಾರಣಕ್ಕೂ ಅವಕಾಶ ಕಲ್ಪಿಸಲಾಗುವುದಿಲ್ಲ.
- ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಹಾಗೂ ತತ್ಸಮಾನ (ಗ್ರೂಪ್-ಬಿ) ವೃಂದದ ಅಧಿಕಾರಿಗಳು ಪತಿ ಅಥವಾ ಪತ್ನಿ ಸರ್ಕಾರಿ ನೌಕರರ ಪ್ರಕರಣದಲ್ಲಿ ನೇಮಕಾತಿ ಪ್ರಾಧಿಕಾರದಿಂದ (ಆಯುಕ್ತರಿಂದ) ಸೇವಾ ಪ್ರಮಾಣ ಪತ್ರ ಪಡೆಯಬೇಕು ಎಂದಿದ್ದು, ಅರ್ಜಿ ಸಲ್ಲಿಸಲು ಆಗುವ ವಿಳಂಬವನ್ನು ತಪ್ಪಿಸಲು ಅನುಕೂಲವಾಗುವಂತೆ ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಂದ ಸೇವಾ ಪ್ರಮಾಣ ಪತ್ರವನ್ನು ಪಡೆಯಲು ತಿಳಿಸಿದೆ. ಉಳಿದಂತೆ ಹೊರಡಿಸಲಾಗಿರುವ ಮಾರ್ಗಸೂಚಿ ಅಂಶಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

(ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಆಯುಕ್ತರ ಕಛೇರಿ.
ಸಾರ್ವಜನಿಕ ಶಿಕ್ಷಣ ಇಲಾಖೆ.
ಬೆಂಗಳೂರು

ನಿರ್ದೇಶಕರು (ಪ್ರೌಢಶಿಕ್ಷಣ)
ಆಯುಕ್ತರ ಕಛೇರಿ.
ಸಾರ್ವಜನಿಕ ಶಿಕ್ಷಣ ಇಲಾಖೆ.
ಬೆಂಗಳೂರು

ಇವರಿಗೆ, ಅಗತ್ಯ ಕ್ರಮಕ್ಕಾಗಿ

1) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ
2) ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3) ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಗುಲ್ಬರ್ಗಾ/ಧಾರವಾಡ
4) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು /ಬೆಳಗಾವಿ/ಕಲಬುರಗಿ
5) ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)
6) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು [ಆಡಳಿತ] ರವರ ಮೂಲಕ)

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ರವರ ಅದ್ಯ ಅವಗಾಹನೆಗಾಗಿ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ .
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.



Scanned with OKEN Scanner